## ಕರ್ನಾಟಕ ಜೀವವೈವಿಧ್ಯ ಮಂಡಳಿ

# Karnataka Biodiversity Board

## ೩೮ನೇ ಮಂಡಳಿ ಸಭೆಯ ಕಾರ್ಯಸೂಚಿಗಳು

# Agenda notes for 38th Board Meeting

**೩೮/೧ – ೩೭ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**

ದಿನಾಂಕ ೨೭/೦೩/೨೦೧೮ರಂದು ಜರುಗಿದ ಮಂಡಳಿಯ ೩೭ನೇ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ದಿ: ೩೧/೦೩/೨೦೧೮ರಂದು ರವಾನಿಸಲಾಗಿದ್ದು, ಮಂಡಳಿಯ ಸದಸ್ಯರುಗಳಾದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಇವರುಗಳ ಸಲಹೆಯ ಮೇರೆಗೆ ಅಜೆಂಡಾ ಸಂ.೩೬/೭ ಮತ್ತು ೩೭/೫/೧ ರಲ್ಲಿನ ವಿಷಯಗಳನ್ನು ತಿದ್ದುಪಡಿಗೊಳಿಸಿ ಅಂತಿಮ ನಡವಳಿಯನ್ನು ದಿನಾಂಕ: ೨೪/೦೫/೨೦೧೮ರಂದು ರವಾನಿಸಲಾಗಿದೆ.

ಈ ಬಗ್ಗೆ ಯಾವುದೇ ತಿದ್ದುಪಡಿ ಬಂದಿಲ್ಲದ ಕಾರಣ ಈ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. **(ಅನುಬಂಧ– I)**

### 38/1-Reading and recording of Proceedings of the 37th Board Meeting.

The Proceedings of the 37th Board meeting held on 27/03/2018 were communicated to all the members on 31/03/2018. The comments on Agenda 36/7 and 37/5/1 were received from Additional Chief Secretary and Principal Secretary Department of Forest, Ecology and Environment. The same was incorporated and the final proceedings have been sent to all members on 24/05/2018.

As there were no comments from the members. The proceedings may be adopted. **(Annexure-I)**

**೩೮/೨ – ೩೭ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು:**

೩೭ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. **(ಅನುಬಂಧ–II)**

### 38/2 - Action taken on 37th Board meeting proceedings.

Action taken on proceedings of 37th Board meeting is placed in **(Annexure-II)**

**೩೮/೩ – ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗು ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿ.**

1. ಮಾರ್ಚ್ ೨೦೧೮ ರಿಂದ ಜೂನ್ ೨೦೧೮ರವರೆಗೆ, ೧೬ ಗ್ರಾಮ ಪಂಚಾಯತಿ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈವರೆಗೆ ೬೦೨೩ ಗ್ರಾಮ ಪಂಚಾಯತಿಗಳಲ್ಲಿ ೪೯೫೫ ಗ್ರಾಮ ಮಟ್ಟದ, ೧೭೬ ತಾಲ್ಲೂಕುಗಳಲ್ಲಿ ೧೩೯ ತಾಲ್ಲೂಕು ಮಟ್ಟದ

ಹಾಗು 30 ಜಿಲ್ಲೆಗಳಲ್ಲಿ 14 ಜಿಲ್ಲಾ ಪಂಚಾಯತಿ ಮಟ್ಟದ ಒಟ್ಟು 5108 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ.

2. ಮಾರ್ಚ್ 2018 ರಿಂದ ಜೂನ್ 2018ರವರೆಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ 67 ಹಾಗೂ 1 ತಾಲ್ಲೂಕು ಮಟ್ಟದಲ್ಲಿ ಒಟ್ಟು 68 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. ಈವರೆಗೆ 1821 ಗ್ರಾಮ ಪಂಚಾಯತಿ ಮಟ್ಟದ ಹಾಗು 24 ತಾಲ್ಲೂಕು ಮಟ್ಟದ ಒಟ್ಟು 1845 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. **(ಅನುಬಂಧ –III)**

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**38/3-Status of Formation of Biodiversity Management Committees (BMC) and Preparation of People's Biodiversity Registers (PBR):**

1. From March to June 2018, 16 BMCs at Grama Panchayat (GP) level have been constituted. Till date 4955 GP BMCs out of 6023 GPs and 139 Taluk Panchayat (TP) BMCs out of 176 TPs and 14 Zilla Panchayat (ZP) BMCs out of 30 ZPs, totalling to **5108** BMCs have been constituted in the State.
2. From March to June 2018, 67 PBRs at GP level and 1 at TP totalling to 68 PBRs have been prepared. Till date, 1821 PBRs at GP level and 24 PBRs at TP level, totalling to **1845** PBRs have been documented.**(Annexure-III)**

The subject is placed before the Board for information.

**38/4 – ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಬಲವರ್ಧನೆ:**

ಜೈವಿಕವೈವಿಧ್ಯ ಅಧಿನಿಯಮ 2002 ಸೆಕ್ಷನ್ 41(1) ಹಾಗೂ ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005, ನಿಯಮ 21(1)ರಂತೆ ಪ್ರತಿ ಸ್ಥಳೀಯ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸುವುದು ಕಡ್ಡಾಯವಾಗಿರುತ್ತದೆ.

ಅದರಂತೆ, ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005, ನಿಯಮ 21(1)ರಂತೆ, ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರು ಆ ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ ಅವರು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ.

ಜೀವವೈವಿಧ್ಯ ನಿರ್ವಹಣಾ ಸಮಿತಿಯನ್ನು ಬಲಪಡಿಸಲು ಹಾಗೂ ಪರಿಣಾಮಕಾರಿಯಾದ ಆಡಳಿತವನ್ನು ನಡೆಸಲು ನಿಯಮ 21(3)ನ್ನು ತಿದ್ದುಪಡಿಸಿಗೊಳಸಲು ಕೋರಲಾಗಿದ್ದು ಪ್ರಸ್ತುತದಲ್ಲಿರುವ ನಿಯಮವನ್ನು ತಿದ್ದುಪಡಿಗೊಳಿಸಿ ಈ ರೀತಿ ಓದಬಹುದಾಗಿರುತ್ತದೆ. "ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಬಹುದು'

ಜೈವಿಕವೈವಿಧ್ಯ ಅಧಿನಿಯಮ 2002 ಸೆಕ್ಷನ್ 63ರ ಪ್ರಕಾರ, ರಾಜ್ಯ ಸರ್ಕಾರವು ಅಧಿಕೃತ ಗೆಜೆಟ್ಟಿನಲ್ಲಿ ಅಧಿಸೂಚನೆಯಿಂದ ಈ ಕಾಯಿದೆಯ ಉದ್ದೇಶಗಳನ್ನು ನಿರ್ವಹಿಸಲು ನಿಯಮಗಳನ್ನು ರೂಪಿಸಬಹುದು.

ಈ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

## 38/4 – Strengthening of Biodiversity Management Committees:

As per the section 41(1) of the Biological Diversity Act, 2002 and Rule 21 (1) of the Karnataka Biological Diversity Rules, 2005 (KBD Rules, 2005), every local body shall constitute a Biodiversity Management Committee within its area of jurisdiction.

Further, as per Rule 21(3) of the KBD Rules, 2005, the chairperson of the BMC shall be elected from amongst the members of the committee in a meeting to be chaired by the Chairperson of the local body.

To strengthen the Biodiversity Management Committee and to facilitate effective administration, it is requested that an amendment of Rule 21 (3) is made and the existing rule is amended to read The Chairman of the local body may become the chairman of the Biodiversity Management Committee'.

As per the section 63 of the BD Act, 2002, the State Government, may, by notification in the Official Gazette, make rules for carrying out the purposes of this Act.

The subject has been placed before the Board for deliberation.

### 38/5– ಕರ್ನಾಟಕ ಗುರುತಿಸುವಿಕೆ, ಅಧಿಸೂಚನೆ, ನಿರ್ವಹಣೆ ಮತ್ತು ಜೀವವೈವಿಧ್ಯ ಪಾರಂಪರಿಕ ತಾಣಗಳ ಸಂರಕ್ಷಣೆಯ ನಿಯಮಗಳು, 2018 (ಕರಡು)

36ನೇ ಮಂಡಳಿಯ ಸಭೆಯ ನಿರ್ಣಯದ ಮೇರೆಗೆ ವಿಷಯ 35/8ರಂತೆ ಆದೇಶ ಸಂ: ಕೆಬಿಬಿ/ಎಚ್‌ಎಸ್‌ಎಂಆರ್/103/2017/18/2061 ದಿನಾಂಕ 31/01/2018ರಂದು "ಕರ್ನಾಟಕ ಗುರುತಿಸುವಿಕೆ, ಅಧಿಸೂಚನೆ, ನಿರ್ವಹಣೆ ಮತ್ತು ಜೀವವೈವಿಧ್ಯ ಪಾರಂಪರಿಕ ತಾಣಗಳ ಸಂರಕ್ಷಣೆಯ ನಿಯಮಗಳು, 2018 (ಕರಡು)"ನ್ನು ಪರಿಶೀಲಿಸಲು ಪರಿಣಿತ ತಜ್ಞರ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ದಿನಾಂಕ 01/03/2018ರಂದು ಸಭೆ ನಡೆಸಿತು. ಸಮಿತಿಯ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ಸಲ್ಲಿಸಲಾಗಿದೆ. **(ಅನುಬಂಧ– IV)**

ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

## 38/5 - Karnataka Identification, Notification, Management and Conservation of Biodiversity Heritage Sites Rules, 2018 (Draft)

As per the resolutions of 36th Board Meeting under Subject-35-8, an Expert Committee was constituted vide order: KBB/HSMR/103/2017-

18/2061 dated 31/01//2018 to look into drafting and finalisation of "Karnataka, Identification, Notification, Management and Conservation of Biodiversity Heritage Sites Rules, 2018". The Committee met on 01/03/2018 and recommended for various changes in the draft. The draft has been updated as per the recommendations of the committee the same has been placed before the Board for approval. **(Annexure.IV)**

**೩೮/–೬ ಸಂಶೋಧನಾ ಪ್ರಸ್ತಾವನೆಗಳನ್ನು ಆಹ್ವಾನಿಸಲು ಆಸಕ್ತಿಯ ಕ್ಷೇತ್ರಗಳು:**

ದಿನಾಂಕ: ೨೧/೦೬/೨೦೧೮ರಂದು ಡಾ. ಎಂ. ಮಹದೇವ ಮೂರ್ತಿ, ಪ್ರೋಫೆಸರ್, ಅರಣ್ಯ ಮತ್ತು ಪರಿಸರ ವಿಜ್ಞಾನ ಇಲಾಖೆ, ಜಿಕೆವಿಕೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಪರಿಣಿತ ಸಮಿತಿಯಲ್ಲಿ ವಿವಿಧ ವಿಷಯಗಳ ಬಗ್ಗೆ ಸಂಶೋಧನಾ ಅಧ್ಯಯನಗಳನ್ನು ನಡೆಸಲು ಪ್ರಸಿದ್ಧ ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲು ಶಿಫಾರಸ್ಸನ್ನು ಮಾಡಿತು. ಸಂಶೋಧನೆಗಾಗಿ ಕ್ಷೇತ್ರಗಳ ಆದ್ಯತೆಯ ಪಟ್ಟಿ ಕೆಳಕಂಡಂತಿವೆ:

೧. ಕರ್ನಾಟಕದ ನಗರ ಜೀವವೈವಿಧ್ಯದ ದಾಖಲಾತಿ/ಆವಿಷ್ಕಾರ.
೨. ಕರ್ನಾಟಕದ ಪ್ರಾಣಿ ಹಾಗೂ ಸಸ್ಯ ಸಂಕುಲಗಳ, ವಿಶೇಷ ಪರಿಸರ ವ್ಯವಸ್ಥೆಗಳ ಜೀವವೈವಿಧ್ಯದ ಸಂರಕ್ಷಣೆ, ಪವಿತ್ರ ಭೂದೃಶ್ಯಗಳ ದಾಖಲೆ / ಆವಿಷ್ಕಾರ.
೩. ಸಾಂಪ್ರದಾಯಿಕ ಪ್ರಭೇಧಗಳು, ತರಕಾರಿಗಳು, ಹಣ್ಣುಗಳು ಜಾನುವಾರುಗಳು (ಅಮೃತ್ ಮಹಲ್ ಕಾವಲ್, ದೇಸಿ ಚಿಕನ್ ಮುಂತಾದುವುಗಳು) ದಾಖಲೆ/ಸಂರಕ್ಷಣೆ.
೪. ಮೌಲ್ಯಾಧಾರಿತ ಸಾಂಪ್ರದಾಯಿಕ ಜೀವವೈವಿಧ್ಯತೆ /ಸಮುದಾಯ ಜ್ಞಾನದ ಜೀವವೈವಿಧ್ಯತೆ
೫. ಸಮಗ್ರ ಗ್ರಹಿಕೆಗಾಗಿ ಸೆಕ್ಷನ್ – ೩೮ರಲ್ಲಿ ಸೂಚಿಸಲಾದ ಜೀವರಾಶಿಗಳ ಅಧ್ಯಯನ.
೬. ಸೆಕ್ಷನ್ – ೩೮ರಲ್ಲಿ ಸೂಚಿಸಲಾದ ಜೀವರಾಶಿಗಳ ಹೊರನೆಲೆ ಹಾಗೂ ಒಳನೆಲೆಗಳ ಸಂರಕ್ಷಣೆ ಹಾಗೂ ಪುನರ್ವಸತಿ.
೭. ಜೀವವೈವಿಧ್ಯತೆಗೆ ಸಂಬಂಧಿಸಿದ ಜೈವಿಕ ಹಾಗೂ ಅಜೈವಿಕ ಅಡಚಣೆಗಳ / ಹಸ್ತಕ್ಷೇಪಗಳ ಮೇಲ್ವಿಚಾರಣೆ ಮತ್ತು ದಾಖಲಾತಿ.
೮. ಜೀವವೈವಿಧ್ಯತೆಯ ಮೇಲ್ವಿಚಾರಣೆಗೆ ಯಾಂತ್ರಿಕತೆ – ಮಾನವ ಪ್ರಾಣಿ ಸಂಘರ್ಷ.
೯. ಕರ್ನಾಟಕದ ಅನ್ಯಲೋಕದ ಆಕ್ರಮಣಕಾರಿ ಪ್ರಬೇಧಗಳ ಜಾಲದ ಅಧ್ಯಯನ ರೂಪಿಸುವಿಕೆ.
೧೦. ಕರ್ನಾಟಕದ ವನ್ಯಜಾತಿಯ ಹಣ್ಣುಗಳು ಮತ್ತು ತರಕಾರಿಗಳ ಜೀವವೈವಿಧ್ಯ ಅಧ್ಯಯನ ಮತ್ತು ದಾಖಲೆ.

ಈ ವಿಷಯವನ್ನು ಮಂಡಳಿಯ ಅನುಮೋದನೆಗೆ ಹಾಗೂ ಯಾವುದೇ ಇತರ ಆಸಕ್ತಿಯ ಕ್ಷೇತ್ರಗಳಿದ್ದಲ್ಲಿ ಹೆಚ್ಚಿನ ಶಿಫಾರಸ್ಸುಗಳಿಗಾಗಿ ಮಂಡಿಸಲಾಗಿದೆ.

**38/6 - Areas of interest on calling for research proposals:**

The Technical Expert Committee, chaired by Dr. M. Mahadeva Murthy, Professor. Dept. of Forestry and Environmental Science, GKVK, Bangalore met on 21/06/2018 and discussed on the various areas of interest to conduct research studies and recommended for calling

proposals from reputed institutions and individuals. The list of priority areas for research is as below:

i. Documentation/Inventorization of Urban Biodiversity of Karnataka.
ii. Documentation/ Inventorization / conservation of Biodiversity of special ecosystems, sacred landscapes and riparian flora and fauna of Karnataka.
iii. Documentation/conservation of species/genetic diversity of traditional crops, vegetables, fruits, domesticated animals like Amrit Mahal cattle, Desi Chicken, etc.
iv. Documentation of value addition to Traditional/community knowledge on biodiversity.
v. Studies on all aspects of Section – 38 notified species for holistic understanding.
vi. Propagation of Section – 38 notified species for the purpose of in situ and ex situ conservation and rehabilitation.
vii. Monitoring and documentation of Biotic and Abiotic interferences associated with Biodiversity.
viii. Monitoring mechanism for biodiversity - Human animal conflict.
ix. Study and formulate a network on alien invasive species in Karnataka.
x. Study and document diversity of wild edible fruits/ vegetables in Karnataka.

The matter is placed before the Board for approval and for further recommendations on any other areas of interest.

**38/7- ಡಿಫಾಲ್ಟ್ ಕಂಪನಿಗಳ ವಿರುದ್ಧ ಕಾನೂನು ಕ್ರಮ ಮತ್ತು ದೂರುಗಳನ್ನು ಸಲ್ಲಿಸುವುದು:**

ಮಂಡಳಿಯಲ್ಲಿ ನಡೆದ 35ನೇ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ, 5 ಡಿಫಾಲ್ಟ್ ಕಂಪನಿಗಳಾದ M/s. Arya Vaidya Sala, Nanjangud, M/s Sava Ltd, Bangalore, M/s. Pradhan Herbal Company, M/s Pandit's Pharmaceuticals and Research Centre, Maddur, M/s. Ind Cassia, Mysore, ನಮೂನೆ–I ಅರ್ಜಿಯನ್ನು ಸಲ್ಲಿಸಿರದ ಕಾರಣ ಈ ಕಂಪನಿಗಳಿಗೆ ಅಂತಿಮ ನೋಟಿಸ್‌ಗಳನ್ನು ಮತ್ತು ವಿಚಾರಣೆಗೆ ಸಾಕಷ್ಟು ಅವಕಾಶ ನೀಡಲಾಗಿದ್ದು ಯಾವುದೇ ಪ್ರತಿಕ್ರಿಯೆ ಬಂದಿಲ್ಲದ ಕಾರಣ ಆಯಾ ಕಂಪೆನಿಗಳ ವ್ಯಾಪ್ತಿಯ ನ್ಯಾಯಾಲಯಗಳಲ್ಲಿ ವಿಚಾರಣೆಯು ಪ್ರಗತಿಯಲ್ಲಿವೆ.

ಮಂಡಳಿಯಲ್ಲಿ ನಡೆದ 37ನೇ ಸಭೆಯಲ್ಲಿ, ಮಂಡಳಿಯಿಂದ ಕಳುಹಿಸಲ್ಪಟ್ಟ ಅಂತಿಮ ನೋಟಿಸ್‌ಗಳನ್ನು ನಿರ್ಲಕ್ಷಿಸಿದ ಕಂಪನಿಗಳ ಕುರಿತು ಚರ್ಚಿಸಿ ಅಂತಹ ಕಂಪನಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು. ಅದರಂತೆ, ಮಂಡಳಿಯಿಂದ ನಾಮನಿರ್ದೇಶಿತ ವಕೀಲರಾದ ಶ್ರೀ. ಹೆಚ್. ಕೆ. ವಸಂತ್‌ರವರಿಗೆ 20 ಕಂಪನಿಗಳ ಫೈಲ್‌ಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿ ಫೈಲ್‌ಗಳನ್ನು ಒಪ್ಪಿಸಲಾಯಿತು.

ಇದಲ್ಲದೇ, ಜೈವಿಕ ವೈವಿಧ್ಯ ಅಧಿನಿಯಮ, 2002 ಮತ್ತು ಎಬಿಎಸ್ ನಿಯಮಗಳು, 2014ರಂತೆ ಜೈವಿಕ ಸಂಪನ್ಮೂಲಗಳನ್ನು ಮಾರಾಟ ಮಾಡುವ ವ್ಯಾಪಾರಿಗಳಗೆ ಕೂಡ ಸಂಬಂಧಪಟ್ಟ ರಾಜ್ಯ ಮಂಡಳಗಳಗೆ ಹಾಗೂ ಅಧಿಕಾರಿಗಳಗೆ ಮುಂಚಿತವಾಗಿ ಸಲ್ಲಿಸುವ ಅರ್ಜಿ ಮತ್ತು ಎಬಿಎಸ್ ಬಾಧ್ಯತೆಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಕರ್ನಾಟಕದಲ್ಲಿರುವಂತಹ ವ್ಯಾಪರಿಗಳಗೆ ಈಗಾಗಲೇ ಮಂಡಳಯಿಂದ ಕೆಲವು ಬಾರಿ ನೋಟೀಸ್‌ಗಳನ್ನು ಕಳುಹಿಸಲಾಗಿದೆ. ಅದರಲ್ಲಿ ಕೆಲವು ವ್ಯಾಪಾರಿಗಳು (ಕಂಪನಿಗಳು ಕಳುಹಿಸಿರುವ ನಮೂನೆ-1ರ ಅರ್ಜಿಯಲ್ಲಿನ ವ್ಯಾಪಾರಿಗಳ ವಿವರದಂತೆ) ನಮೂನೆ- I ಹಾಗೂ ಎಬಿಎಸ್ ಬಾಧ್ಯತೆಗಳ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ, ಅಂತಿಮ ನೋಟೀಸ್‌ಗಳನ್ನು ಕಳುಹಿಸಲಾಗಿದ್ದರೂ ಸಹ ನಮೂನೆ- I ಹಾಗೂ ಎಬಿಎಸ್ ಬಾಧ್ಯತೆಗಳ ಅರ್ಜಿಗಳನ್ನು ಇದುವರೆಗೂ ಸಲ್ಲಿಸಿರದ ವ್ಯಾಪಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮಂಡಳ ಸಭೆಗೆ ಚರ್ಚೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ **(ಅನುಬಂಧ-V)**

**38/7- Legal action against defaulting entities and filing of complaints**:

As resolved in the 35th meeting of the Board, complaints against the 5 defaulting companies, M/s. Arya Vaidya Sala, Nanjangud, M/s Sava Ltd, Bangalore, M/s. Pradhan Herbal Company, M/s Pandit's Pharmaceuticals and Research Centre, Maddur, M/s. Ind Cassia, Mysore, which were given final notices and ample opportunity for hearing have been filed in the jurisdictional courts for non-submission of Form-I and the court hearings are in progress.

The matter regarding initiating legal action against companies that continued to ignore the final notices sent by the Board was discussed during the 37th Board meeting and it was resolved to initiate legal action against such companies that continue to ignore the notices sent by the Board. Accordingly, 20 company files have been handed over to the advocate empanelled with the Board, Mr. H.K. Vasanth, for pursuing further legal action.

Further, as per the BD Act, 2002 and the ABS Guidelines, 2014, traders of bio-resources are also mandated to submit the prior intimation and the ABS obligation to the concerned authorities. Several notices were sent to traders located in Karnataka to furnish the Form-I and the ABS obligation (details and addresses of traders were obtained from the Form-I submitted by various companies), but very few traders have come forward to submit Form-I to the Board.

Therefore, the matter is put up for further discussion and approval of the Board for pursuing legal action against the traders who have been served with final notices **(Annexure-V).**

## 38/8 – ವಾಣಿಜ್ಯ ಬಳಕೆಗೆ ಜೈವಿಕ ಸಂಪನ್ಮೂಲಗಳನ್ನು ಬಳಕೆ ಮಾಡುವುದಕ್ಕಾಗಿ ಎಬಿಎಸ್ ಒಪ್ಪಂದದ ಪತ್ರ:

ದಿನಾಂಕ 2ನೇ ಮಾರ್ಚ್ 2018ರಂದು ನಡೆದ 2ನೇ ಎಬಿಎಸ್ ಪರಿಣಿತಿ ಸಮಿತಿಯ ಉಪ–ಸಮಿತಿಯ ಸಭೆಯು ಚರ್ಚಿಸಿ ನಿರ್ಣಯಿಸಿದ ಪ್ರಕಾರ, ವಾಣಿಜ್ಯ ಬಳಕೆಗಾಗಿ ಜೈವಿಕ ಸಂಪನ್ಮೂಲಗಳನ್ನು ಬಳಸಲು ವಿವಿಧ ಕಂಪನಿಗಳಿಂದ ಸಲ್ಲಿಸಲ್ಪಟ್ಟ ಈಗಾಗಲೇ ಸಲ್ಲಿಸಿರುವ ನಮೂನೆ–I ರ ಅರ್ಜಿಗಳ ಪರಿಶೀಲನೆ ನಂತರ ಮಂಡಳಿಯಿಂದ ಕಂಪನಿಗಳ ಜೊತೆ ಎಬಿಎಸ್ ಒಪ್ಪಂದವನ್ನು ಮಾಡಿಕೊಳ್ಳಲು ಕರಡು ಪ್ರತಿಯನ್ನು ತಯಾರಿಸಲು ನ್ಯಾಷ್‌ನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ (ಎನ್‌ಎಲ್‌ಎಸ್‌ಐಯು)ಕ್ಕೆ ಕೋರಲಾಗಿತ್ತು. ತದನಂತರ, ಈ ವಿಷಯವನ್ನು ದಿನಾಂಕ 20ನೇ ಜೂನ್ 2018ರಂದು ನಡೆದ 3ನೇ ಎಬಿಎಸ್ ಪರಿಣಿತಿ ಸಮಿತಿಯ ಉಪ–ಸಮಿತಿಯ ಸಭೆಯಲ್ಲಿ ಎಬಿಎಸ್ ಒಪ್ಪಂದದ ಎನ್‌ಎಲ್‌ಎಸ್‌ಐಯುರವರು ರಚಿಸಿದ ಕರಡು ಪ್ರತಿಯನ್ನು ಸಮಿತಿ ಸದಸ್ಯರುಗಳು ಮತ್ತೊಮ್ಮೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಒಪ್ಪಿಗೆ ಸೂಚಿಸಿದರು ಮತ್ತು ಮಂಡಳಿಯ ಅಧ್ಯಕ್ಷರು ಸಹ ಇದಕ್ಕೆ ಅನುಮೋದನೆ ನೀಡಿದರು. ಅದರಂತೆ, ಇನ್ನು ಮುಂದೆ ಕಂಪನಿಯವರ ಜೊತೆ ಒಪ್ಪಂದ ಮಾಡಿಕೊಳ್ಳುವ ಕೆಲಸಗಳು ಕಾರ್ಯಗತಗೊಳ್ಳುತ್ತವೆ.

ಎಬಿಎಸ್ ಪರಿಣಿತಿ ಸಮಿತಿಯ ಉಪ–ಸಮಿತಿಯ ಸಭೆಯ ನಡವಳಿಗಳು ಮತ್ತು ಎಬಿಎಸ್ ಒಪ್ಪಂದದ ಅಂತಿಮ ಪ್ರತಿಯನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದೆ **(ಅನುಬಂಧ– VI)**

## 38/8 - ABS Agreement document for access to biological resources for commercial utilization:

As per the resolution of the 2nd meeting of the ABS Expert Panel sub-committee (held on 2nd March 2018), the National Law School of India University (NLSIU) was solicited to draft the ABS agreement document for disposing off the applications in Form-I submitted by various entities for commercial utilization of bio-resources. The document drafted by the NLSIU was approved during the 3rd meeting of the ABS Expert Panel sub-committee (held on 20th June 2018) and the Chairman, KBB, has also accorded the approval for the same. ABS Agreements with entities that submit Form-I will be executed.

The proceedings of the meeting of the Expert Panel on ABS and the ABS Approval-Agreement document is put up for the approval of the Board. **(Annexure-VI).**

## 38/9 – ಕರ್ನಾಟಕ ಅರಣ್ಯ ಇಲಾಖೆಯು ವಶಪಡಿಸಿಕೊಂಡ ರಕ್ತ ಚಂದನದ ಹರಾಜು ಪ್ರಕಿಯೆ:

ಎಬಿಎಸ್ ನಿಯಮಗಳು, 2014ರ ನಿಯಮ 3(3)ರ ಪ್ರಕಾರ ಹೆಚ್ಚಿನ ಆರ್ಥಿಕ ಮೌಲ್ಯ ಹೊಂದಿರುವ ಜೈವಿಕ ಸಂಪನ್ಮೂಲಗಳಾದ ಶ್ರೀಗಂಧದ ಮರ, ರಕ್ತ ಚಂದನದ ಮರ ಮುಂತಾದವುಗಳು ಹರಾಜು ಅಥವಾ ಮಾರಾಟದ ಒಟ್ಟು ಬೆಲೆಯ ಶೇ. 5ಕ್ಕಿಂತ ಕಡಿಮೆಯಿಲ್ಲದ ಬಳಕೆಯ ಲಾಭವನ್ನು ಒಳಗೊಂಡಿರುತ್ತದೆ. ಕರ್ನಾಟಕ ಅರಣ್ಯ ಇಲಾಖೆಯಲ್ಲಿ ನಡೆಯುವ ರಕ್ತ ಚಂದನದ ಹರಾಜಿನಿಂದ

ಕೊಂಡುಕೊಂಡಿರುವ ಯಶಸ್ವಿ ಬಿಡ್ಡುದಾರರಿಗೆ ಮಾರಾಟದ ಒಟ್ಟು ಬೆಲೆಯ ಶೇ. 5ಕ್ಕಿಂತ ಕಡಿಮೆಯಿಲ್ಲದ ಬಳಕೆಯ ಲಾಭವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಪಾವತಿಸಲು ಅರಣ್ಯ ಇಲಾಖೆಯು ನಿರ್ದೇಶಿಸಲಾಗಿತ್ತು. ನಂತರ ಯಶಸ್ವಿ ಬಿಡ್ಡುದಾರರಿಂದ ಎಬಿಎಸ್ ಮೊತ್ತ ಸುಮಾರು ರೂ. 45 ಲಕ್ಷಗಳನ್ನು ಮಂಡಳಿಗೆ ಠೇವಣಿಯಾಗಿರುತ್ತದೆ. ಹಾಗೆಯೇ, ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (HoFF) ಈ ವಿಷಯದ ಬಗ್ಗೆ ಮಂಡಳಿಗೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲು ವಿನಂತಿಸಿದರು.

ಮುಂದುವರಿದು, ಜೈವಿಕ ವೈವಿಧ್ಯ ಅಧಿನಿಯಮ, 2002ರಡಿಯಲ್ಲಿ ರಕ್ತ ಚಂದನದ ಬಳಕೆಯಿಂದ ಉಂಟಾಗುವ ಬಳಕೆಗಳ ಸಂರಕ್ಷಣೆ, ಸಮರ್ಥನೀಯ ಬಳಕೆ ಮತ್ತು ಲಾಭಗಳ ನ್ಯಾಯಸಮ್ಮತ ಹಂಚಿಕೆಗಾಗಿ ನೀತಿ ಚೌಕಟ್ಟನ್ನು ಅಭಿವೃದ್ಧಿಪಡಿಸುವುದಕ್ಕಾಗಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ (ಎನ್‌ಬಿಎ)ಜವರು ರಚಿಸಿದ ಪರಿಣಿತಿ ತಜ್ಞರ ಸಮಿತಿಯು ವಶಪಡಿಸಿಕೊಂಡ ರಕ್ತ ಚಂದನದ ಮಾರಾಟದಿಂದ ಬಂದ ಒಟ್ಟು ಠೇವಣಿಯ ಮೊತ್ತದಲ್ಲಿ ಅಲ್ಪ ಶೇಕಡಾವಾರು ಮೊತ್ತವನ್ನು ರಕ್ತ ಚಂದನದ ನಿರ್ದಿಷ್ಟ ಪ್ರದೇಶದ ರಾಜ್ಯ ಜೀವವೈವಿಧ್ಯ ಮಂಡಳಿಗೆ ಹಂಚಿಕೆ ಮಾಡಬೇಕು ಎಂದು ಸೂಚಿಸಲಾಯಿತು. ವಶಪಡಿಸಿಕೊಂಡಿರುವ ರಕ್ತ ಚಂದನದ (ಆಂಧ್ರ ಪ್ರದೇಶ ಮೂಲವನ್ನು ಹೊರತುಪಡಿಸಿ ವಶಪಡಿಸಿಕೊಂಡಿರುವುದನ್ನು) ಮಾರಾಟದಿಂದ ಪಡೆದ ಬಳಕೆಯ ಲಾಭದಲ್ಲಿ, ಆಂಧ್ರ ಪ್ರದೇಶಕ್ಕೆ ಶೇ.70ರಷ್ಟು ಮತ್ತು ಎನ್‌ಬಿಎಗೆ ಶೇ.30ರಷ್ಟು ಹಂಚಿಕೆ ಮಾಡಬಹುದು ಎಂದು ಸೂಚಿಸಲಾಗಿದೆ **(ಅನುಬಂಧ– VII)**

ಕರ್ನಾಟಕ ಅರಣ್ಯ ಇಲಾಖೆಯ ಪ್ರಮಾಣಿಕ ಪ್ರಯತ್ನ, ಸಹಕಾರ ಮತ್ತು ಆಡಳಿತಾತ್ಮಕ ಖರ್ಚುಗಳಿಂದ ನಡೆಸಿದ ರಕ್ತ ಚಂದನದ ಹರಾಜಿನಲ್ಲಿ, ರಕ್ತ ಚಂದನ ಪಡೆದ ಯಶಸ್ವಿ ಬಿಡ್ಡುದಾರರಿಂದ ಪಡೆದ ಬಳಕೆ ಮತ್ತು ಲಾಭ ಹಂಚಿಕೆಯ ಮೊತ್ತವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ತದನಂತರ, ಎನ್‌ಬಿಎಯು ನಡೆಸಿದ ರಕ್ತ ಚಂದನದ ಪರಿಣಿತಿ ಸಮಿತಿಯ ಸಭೆಯು ನಿರ್ಣಸಿ ಶಿಫಾರಸು ಮಾಡಿದ ಪ್ರಕಾರ ಶೇ. 30ರಷ್ಟು ಅಂದರೆ, ಕನಿಷ್ಠ 3/4 ನೇ ಬಳಕೆ ಮತ್ತು ಲಾಭ ಹಂಚಿಕೆಯ ಪ್ರಮಾಣದ ಮೊತ್ತವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಹಿಂತಿರುಗಿಸಲಾಗುತ್ತದೆ ಎಂದು ಪ್ರಸ್ತಾಪಿಸಲಾಗಿದೆ.

ಈ ವಿಷಯವನ್ನು ಚರ್ಚೆಗಾಗಿ ಮತ್ತು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸಲ್ಲಿಸಲಾಗಿದೆ.

### 38/9 - Auction of the confiscated Red Sanders by Karnataka Forest Department:

As per the regulation 3(3) of the ABS Regulations, 2014, in cases of biological resources having high economic value such as sandalwood, red sanders etc, the benefit sharing may include an upfront payment of not less than 5% on the proceeds of the auction or sale amount. The Karnataka Forest Department has directed the successful bidders in the auction sales of Red Sanders, which was confiscated by the Department, to submit the 5% upfront payment of ABS to the Karnataka Biodiversity Board. ABS amount of Rs. 45 Lakhs from the sale of the red sanders has been deposited to the Board by the bidders. The PCCF (HoFF) was also requested by the Board to indicate the source of the confiscated Red Sanders to take further action in the matter.

Further, the expert committee, constituted by the National Biodiversity Authority (NBA) for developing the policy framework for the conservation, sustainable use and fair and equitable sharing of benefits arising from the utilization of Red sanders under the BD Act, 2002, has recommended certain percentages as allocation of the benefit sharing amount accrued from the sale of confiscated Red Sanders. It was recommended that the benefits accrued from the sale of confiscated Red Sanders (seized/confiscated other than in AP-source unknown), the sharing of benefits may be in ratio of 70% to Andhra Pradesh and 30% to the NBA **(Annexure-VII).**

It is brought to the kind notice of the Board that sincere efforts, co-ordination and administrative expenses have been borne by the Board in securing the requisite documents as well as the ABS on red sanders from the successful bidders of the auctions conducted by the Karnataka Forest Department. Therefore, it is proposed that ABS amount to the tune of at-least $3/4^{th}$ of the 30% remitted to NBA (as per the recommendation of the Expert Committee on Red Sanders), is returned to Karnataka Biodiversity Board.

The matter is put up for deliberation and suitable decision of the Board.

**38/10 – ಮಂಡಳಿಗೆ ಕಾನೂನು ಸಲಹೆಗಾಗಿ:**

ಪ್ರಸ್ತುತವಾಗಿ, ಜೈವಿಕವೈವಿಧ್ಯ ಅಧಿನಿಯಮದ ನಿಬಂಧನೆಗಳ ವಿಷಯದಲ್ಲಿ ವಾಣಿಜ್ಯ/ಸಂಶೋಧನಾ ಘಟಕಗಳಿಂದ ಸಂಗ್ರಹಿಸಲಾದ ವಿವಿಧ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಕಾನೂನು ನೋಟೀಸ್‌ಗಳನ್ನು ಕಳುಹಿಸುವುದಕ್ಕಾಗಿ, ಕಡತಗಳ ಕಾನೂನು ಪರಿಶೀಲನೆಗಾಗಿ, ಕರಡು ಪ್ರತ್ಯುತ್ತರಗಳನ್ನು ನೀಡಲು, ಕರಡು ಪತ್ರಗಳನ್ನು ತಯಾರಿಸಲು ಮಂಡಳಿಯು ಯಾವುದೇ ಕಾನೂನು ಸಲಹೆಗಾರರನ್ನು ಹೊಂದಿರುವುದಿಲ್ಲ. ಆದ್ದರಿಂದ, ಸರ್ಕಾರದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ/ಸಂಸ್ಥೆಗಳಿಂದ ಕಾನೂನು ಸಲಹೆಗಾಗಿ ಮಂಡಳಿಯ ಪ್ರಕರಣಗಳ ಆಧಾರದ ಮೇಲೆ, ಮಂಡಳಿಯ ಅಧ್ಯಕ್ಷರ ಅನುಮೋದನೆಯೊಂದಿಗೆ ಸಮಾಲೋಚಿಸಬೇಕೆಂದು ವಿನಂತಿಸಲಾಗಿದೆ.

ಈ ವಿಷಯವನ್ನು ಮಂಡಳಿಯ ಚರ್ಚೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

**38/10 – Legal Advice for the Board:**

At present, the Board does not have a legal advisor to support in terms of drafting of legal notices, legal review of files, drafting replies in response to various queries raised by commercial/research entities in respect of the provisions of the BD Act. Therefore, it is requested that legal advice from a recognised University/Institution may be consulted on a case-by-case basis with the due approval of the chairman, KBB.

The matter is put up for deliberation and approval of the Board.

**38/11 – ಸಹಾಯಕ ಸಿಬ್ಬಂದಿಗಳ ಹಾಗೂ ಸಂಶೋಧನಾ ಸಹಾಯಕರ (ಪ್ರಾಣಿಶಾಸ್ತ್ರ) ವೇತನ ಹೆಚ್ಚಳ:**

**ಅ)** ದಿನಂಕ 27/05/2015ರಂದು ನಡೆದ ಮಂಡಳಿಯ 28ನೇ ಸಭೆಯಲ್ಲಿ ಸಹಾಯಕ ಸಿಬ್ಬಂದಿಗಳ ವೇತನದ ಹೆಚ್ಚಳದ ಬಗ್ಗೆ ಚರ್ಚಿಸಿ (ಕಳೆದ ಒಂದು ವರ್ಷದಲ್ಲಿ ಸರ್ಕಾರ ನೀಡಿದ ತುಟ್ಟಿಭತ್ಯೆಗೆ ಸಮಾನವಾಗಿ) ವೇತನವನ್ನು ತುಟ್ಟಿಭತ್ಯ ಹಾಗೂ 3% ವಾರ್ಷಿಕ ಮುಂಬಡ್ತಿಗೆ ಅನುಗುಣವಾಗಿ ಹೆಚ್ಚಿಸಬೇಕೆಂದು ಹಾಗೂ ಮುಂದಿನ ವೇತನ ಪರಿಷ್ಕರಣೆ ಆಗುವವರೆಗೆ ಸಹಾಯಕ ಸಿಬ್ಬಂದಿಗಳ ಸಾಮಾನ್ಯ ನಿಯಮವಾಗಿರಬೇಕೆಂದು ನಿರ್ಣಯಿಸಿತು. ದಿನಾಂಕ 01/07/2018ರಂದು ಎಲ್ಲಾ ಸಿಬ್ಬಂದಿಗಳು ತುಟ್ಟಿಭತ್ಯ ಹಾಗೂ 3% ವಾರ್ಷಿಕ ಮುಂಬಡ್ತಿಗೆ ಅರ್ಹರಾಗಿರುತ್ತಾರೆ. ಸಿಬ್ಬಂದಿಗಳ ವೇತನ ಪರಿಷ್ಕರಣೆಯನ್ನು ಮಾಡಬೇಕೆಂದು ಕೋರಿರುತ್ತಾರೆ.

6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರವು ರಚಿಸಿದ ಆಯೋಗದ ವರದಿಯ ಆದೇಶ ಸಂ ಎಫ್‌ಡಿ 06 ಎಸ್‌ಆರ್‌ಪಿ 2018 ದಿನಾಂಕ 01/03/2018ತಂತೆ ಎಲ್ಲಾ ರಾಜ್ಯದ ಸರ್ಕಾರಿ ನೌಕರರುಗಳಿಗೆ ದಿನಾಂಕ 01/04/2018ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯನ್ನು ಸಂಬಳಕ್ಕೆ ಸೇರ್ಪಡಿಸಿ ಸರಾಸರಿ ಶೇ 27%ರಷ್ಟು ವೇತನದ ಪರಿಷ್ಕರಣೆಯಾಗಿರುತ್ತದೆ. ಮಂಡಳಿಯ ಅಧ್ಯಕ್ಷರು ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಹಾಯಕ ಸಿಬ್ಬಂದಿಗಳಿಗೆ ದಿನಾಂಕ 01/07/2018ರಿಂದ ಜಾರಿಗೆ ಬರುವಂತೆ, ಇದೇ ನಿಯಮವನ್ನು ಅನುಸರಿಸಿ 3% ವಾರ್ಷಿಕ ಮುಂಬಡ್ತಿ ಹಾಗೂ ಸರ್ಕಾರದ ನಿಯಮದಂತೆ ತುಟ್ಟಿಭತ್ಯೆಯನ್ನು ನೀಡುವಂತೆ ಸಲಹೆಯನ್ನು ನೀಡಿರುತ್ತಾರೆ **(ಅನುಬಂಧ– VIII)**

ಆ) ಮಂಡಳಿಯ ಅಧ್ಯಕ್ಷರು ಹಾಗೂ ಮಂಡಳಿಯ ಸದಸ್ಯರುಗಳು ಸಂಶೋಧನಾ ಸಹಾಯಕರ (ಪ್ರಾಣಿಶಾಸ್ತ್ರ) ವೇತನವನ್ನು ಮಾಸಿಕ ರೂ 45,000/-ಗಳಿಗೆ ನಿಗಧಿಗೊಳಿಸಿ, ಪ್ರತಿ ವರ್ಷ ತುಟ್ಟಿಭತ್ಯ ಹಾಗೂ 3% ವಾರ್ಷಿಕ ಮುಂಬಡ್ತಿಯನ್ನು ಸರ್ಕಾರದ ನಿಯಮದಂತೆ ನೀಡಬಹುದಾಗಿರುತ್ತದೆ ಎಂದು ಸಲಹೆಯನ್ನು ನೀಡಿರುತ್ತಾರೆ.

ಈ ವಿಷಯವನ್ನು ಮಂಡಳಿಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ

## 38/11 – Salary Enhancement of Supporting Staff and Research Associate (Zoology):

a) The 28th Board Meeting held on 27/05/2015 discussed on the enhancement of emoluments to the supporting staff and resolved that it should be enhanced according to the increase in dearness (equivalent to DA given by the Government of Karnataka in last one year) plus an increment of 3% for each completed year. This should be a general policy for supporting staff till further revision of the policy takes place. From 01/07/2018 the staffs are eligible for dearness Plus 3% of the increment. The staff have requested for revision of salary.

As per the recommendation of Sixth Pay Commission Government implemented the commission report vide Order No. FD 06 SRP 2018 dated 1/3/2018, to all the State Government Employees with effect from 01/04/2018 merging the DA into the salary leading to hike of average of 27% of total emoluments. The Chairman has suggested to

follow the same policy while fixing their increment with effect from 01/07/2018 for supporting staff of Karnataka Biodiversity Board along with 3% annual increment and DA as per Government norms. **(Annexure-VIII)**

b) As suggested by the Chairman, Karnataka Biodiversity Board and Board Members the salary of Research Associate (Zoology) may be fixed at Rs.45,000/- per month with annual increment of 3% and DA as per Government norms.

This is put up for deliberation and approval of the Board.

**38/12– ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿಗಳ ಪ್ರಯಾಣಭತ್ಯ ಹಾಗೂ ತುಟ್ಟಿಭತ್ಯ ಪರಿಷ್ಕರಣೆ:**

| ಕ್ರ.ಸಂ | ಹುದ್ದೆ | ಪ್ರಯಾಣ ಭತ್ಯ | ವಾಸ್ತವಯ | | ತುಟ್ಟಿಭತ್ಯ |
|---|---|---|---|---|---|
| | | | ಜಿಲ್ಲೆ | ತಾಲ್ಲೂಕು | |
| 01 | ಸಮಾಲೋಚಕರು / ಸಂಶೋಧನಾ ಸಹಾಯಕರು | ರೈಲು ಎಸಿ 2 ಮತ್ತು ಎಲ್ಲಾ ವಿಧದ ಬಸ್ಸು , ಬಾಡಿಗೆಗೆ ವಾಹನಗಳು | 1,500/- | 1,200/- | 300/- |
| 02 | ತಾಂತ್ರಿಕ ಸಹಾಯಕರು | ರೈಲು ಎಸಿ 2 ಮತ್ತು ಎಲ್ಲಾ ವಿಧದ ಬಸ್ಸು | 1,500/- | 1,200/- | 300/- |
| 03 | ಕಾರ್ಯನಿರ್ವಾಹಕರು | ರೈಲು ಎಸಿ 3 ಮತ್ತು ಎಲ್ಲಾ ವಿಧದ ಬಸ್ಸು | 1,500/- | 1,200/- | 300/- |

- ದಿನಾಂಕ 22/04/2014ರಂದು ನಡೆದ 22ನೇ ಮಂಡಳಿಯ ಸಭೆಯಲ್ಲಿ (ವಿಷಯ ಸಂಖ್ಯೆ 22/4) ಅನಮೋದನೆಗೊಂಡಂತೆ ನಿಯೋಜನಾ ಅಧಿಕಾರಿಗಳಿಗೆ ಪಾವತಿಸಲಾಗುತ್ತಿದೆ.
- ವಾಹನವನ್ನು ಬಾಡಿಗೆಗೆ ಪಡೆದಲ್ಲಿ ನಿಗಧಿತ ನಮೂನೆಯಲ್ಲಿ ಬಿಲ್ಲುಗಳನ್ನು ಸಲ್ಲಿಸಬೇಕು.
- ಅಸಾದಾರಣ ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ನಿಗಧಿಪಡಿಸಿದ ಮಿತಿಗಿಂತ ಹೆಚ್ಚಾಗಿದ್ದಲ್ಲಿ ಆ ವೆಚ್ಚವನ್ನು ಅಧ್ಯಕ್ಷರ ಅನುಮೋದನೆ ಮೇರೆಗೆ ಭರಿಸಬಹುದಾಗಿರುತ್ತದೆ.

**38/12 – Revision of TA and DA for Staff of KBB:**

| Sl. No. | Designation | TA | Accommodation | | DA |
|---|---|---|---|---|---|
| | | | District | Taluk | |
| 01 | Consultant / RA | For Train AC 2 and All type of Bus, Hiring of Vehicles | 1,500/- | 1,200/- | 300/- |

| | | | | | |
|---|---|---|---|---|---|
| 02 | Technical Executive | For Train AC 2 and All type of Bus | 1,500/- | 1,200/- | 300/- |
| 03 | Executive Assistants | For Train AC 3 and All type of Bus | 1,500/- | 1,200/- | 300/- |

- The Officers on Deputation will be paid as per approved by the Board in its 22nd Board meeting in 22/04/2014 (Agenda No. 22/4).
- For Hiring of Vehicles – Bills need to be submitted in prescribed format.
- In exceptional and unavoidable circumstances the Chairman may permit the expenditure over and above the prescribed limits.

The matter is put up for the Board for deliberation and approval.

**38/13 : ಎಬಿಎಸ್ ಶಾಖೆಯ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವುದು:**

ದಿನಾಂಕ 24/12/2014ರಂದು ನಡೆದ 26ನೇ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಉಪ ಕಾರ್ಯದರ್ಶಿಯ ಶ್ರೇಣಿಗಿಂತ ಕಡಿಮೆಯಲ್ಲದ ರಾಜ್ಯ ಸರ್ಕಾರದ ನಿವೃತ್ತ ಅಧಿಕಾರಿಯ ನೇತೃತ್ವದಲ್ಲಿ ಇಬ್ಬರು ಸಿಬ್ಬಂದಿಗಳ ಒಂದು ಸೆಲ್‌ನ್ನು ರಚಿಸಲು ನಿರ್ಣಯಿಸಿತು. ಸಮಾಲೋಚಕರ ಗುತ್ತಿಗೆ ಅವಧಿಯು ಪೂರ್ಣಗೊಂಡನಂತರ ಜುಲೈ 2015ರಂದು ಹೊಸ ಅಧಿಸೂಚನೆಯನ್ನು ಹೊರಡಿಸಿತು.

ಆಗಸ್ಟ್ 2015ರಂದು ಅಧಿಸೂಚನೆಯ ಮೇರೆಗೆ ಸಂದರ್ಶನವನ್ನು ನಡೆಸಿ ಸಮಾಲೋಚಕರು (ಎ.ಬಿಎಸ್)ನ್ನು ನೇಮಕ ಮಾಡಲಾಯಿತು. ಅದರಂತೆ 26ನೇ ಮಂಡಳಿಯ ನಿರ್ಣಯದಂತೆ ಎಬಿಎಸ್ ಸೆಲ್‌ಗೆ ಇಬ್ಬರು ತಾಂತ್ರಿಕ ಸಹಾಯಕರನ್ನು ನೇಮಕ ಮಾಡಲಾಯಿತು. ಸಮಾಲೋಚಕರು (ಎ.ಬಿಎಸ್) ಸೆಪ್ಟಂಬರ್ 2015ರಂದು 3 ವರ್ಷಗಳ ಅವಧಿಗೆ ನೇಮಕಗೊಂಡು ಇವರ ಸೇವಾ ಅವಧಿಯು 31ನೇ ಆಗಸ್ಟ್ 2018ಕ್ಕೆ ಪೂರ್ಣಗೊಳ್ಳಲಿದೆ.

ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005 ನಿಯಮ 13 (vii) "ನಿಗಧಿತ ಅವಧಿಗೆ ಸಮಾಲೋಚಕರನ್ನು ನೇಮಿಸಿ 3 ವರ್ಷಗಳ ಅವಧಿಗೆ ಮೀರದಂತೆ ಮಂಡಳಿಯ ಪರಿಣಾತ್ಮಕ ಕಾರ್ಯ ಚಟುವಟಿಕೆಗೆ ತಾಂತ್ರಿಕ ಸೇವೆಯನ್ನು ಪಡೆಯಬಹುದು"

ಅವಶ್ಯಕತೆಯಿದ್ದಲ್ಲಿ ಮೂರು ವರ್ಷಗಳ ಅವಧಿಗಿಂತ ಸಮಾಲೋಚಕರ ಸೇವೆಯು ಅಗತ್ಯವಿದ್ದಲ್ಲಿ ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದು ನೇಮಿಸಬಹುದಾಗಿರುತ್ತದೆ. ಸಮಾಲೋಚಕರ ಹಾಗೂ ತಾಂತ್ರಿಕ ಸಹಾಯಕರುಗಳ ಸೇವೆಯು ಮಂಡಳಿಯ ಎಬಿಎಸ್ ಶಾಖೆಗೆ ಅವಶ್ಯವಾಗಿರುತ್ತದೆ.
ಸಮಾಲೋಚಕರ (ಎ.ಬಿಎಸ್)ನ ಸೇವೆಯು ಮುಂದುವರೆಸಿದಲ್ಲಿ ಮಾಸಿಕ ವೇತನದೊಂದಿಗೆ ವಾರ್ಷಿಕ 10% ಬಡ್ತಿಯನ್ನು ನೀಡಬಹುದಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**38/13 – Continuation of the services of Staff of ABS Cell:**

The 26th Board Meeting held on 24/12/2014 discussed and resolved to create ABS cell of two persons headed by a retired officer from State Government of the rank equivalent to and not less than Deputy Secretary to the Government. Upon expiry of the contract period of the Consultant (ABS), a fresh notification for the post was called during July 2015.

Following the notification and the interview held in August 2015, the Consultant (ABS) was recruited. Further, as per the resolution of the 26th Board meeting, two technical executives were recruited under the ABS Cell. The consultant (ABS) was appointed in September 2015 for a period of 3 years. Services of ABS Consultant will expire on 31st August 2018.

As per Karnataka Biological Diversity Rules 2005, Rule 13 (vii), The Board may "Engage consultant for a specific period, not exceeding three years, for providing technical assistance to the Board in the effective discharge of its functions.

Provided that if it is necessary and expedient to engage any consultant beyond the period of three years, the Board shall seek prior approval the State Government for such an engagement"

Services of the Consultant (ABS) and the two technical executives of the ABS Cell are essential for Karnataka Biodiversity Board.

For continuation of the engagement of consultant (ABS), an annual increment of 10% in the monthly emoluments maybe considered.

The subject is placed before the Board for deliberation and approval.

**38/14–ಯುಎನ್‌ಇಪಿ–ಜೆಫ್–ಎಂಒಇಎಫ್–ಎಬಿಎಸ್ "ಜೈವಿಕ ಅಧಿನಿಯಮ, 2002 ಮತ್ತು ನಿಯಮಗಳ ಅಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆ ಸಂಬಂಧಿತ ನಿಬಂಧನೆಗಳ ಜಾರಿ ಮತ್ತು ಸಾಮರ್ಥ್ಯ ವರ್ಧನೆ"**

1. **ಮಾಧ್ಯಮಕ್ಕಾಗಿ ಜಾಗೃತಿ ಕಾರ್ಯಗಾರ:**

ಜೈವಿಕ ಅಧಿನಿಯಮ, 2002 ಮತ್ತು ನಿಯಮಗಳ ಅಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆ ಸಂಬಂಧಿತ ನಿಬಂಧನೆ ಬಗ್ಗೆ ಮಾಧ್ಯಮಕ್ಕೆ ಒಂದು ಜಾಗೃತಿ ಕಾರ್ಯಗಾರವನ್ನು 24ನೇ ಮಾರ್ಚ್ 2018 ರಂದು ಅರಣ್ಯಭವನ, 8ನೇ ಮುಹಡಿ, ಮಲ್ಲೇಶರಂ, ಬೆಂಗಳೂರಿನಲ್ಲಿ ನಡೆಸಿತು. ಈ ಕಾರ್ಯಗಾರವು ಮಾಧ್ಯಮದವರಿಗೆ ಜಾಗೃತಿ ಮೂಡಿಸಲು ಮತ್ತು ಅಧಿನಿಯಮ ಉದ್ದೇಶಗಳನ್ನು ಈಡೇರಿಸಲು ಹಾಗು ಮಾಧ್ಯದವರನ್ನು ಬೆಂಬಲಿಸುತ್ತದೆ. ಇದು

ಸಮಾಜದ ಮೇಲೆ ದೊಡ್ಡ ಪರಿಣಾಮವನ್ನು ಉಂಟುಮಾಡುವಲ್ಲಿ ಸಹಾಯಕವಾಗಿರುವುದು. ಈ ಕಾರ್ಯಗಾರಕ್ಕೆ ಮಾಧ್ಯಮ ಪ್ರತಿನಿಧಿಗಳು ಹಾಜರಾಗಿದ್ದರು, ಒಟ್ಟು 42 ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಿದ್ದರು.

2. **ಡಿ ಡಿ ಚಂದನದಲ್ಲಿ ಮ್ಯೂಟ್ ಶೀರ್ಷಿಕೆಯ ಪ್ರಸಾರ**

**ಯುಎನ್‌ಇಪಿ-ಜೆಫ್-ಎಂಒಇಎಫ್-ಎಬಿಎಸ್** ಯೋಜನೆಯ ಅಡಿಯಲ್ಲಿ, ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜಾಹಿರಾತನ್ನು ಡಿಡಿ ಚಂದನದಲ್ಲಿ 23ನೇ ಮೇ, 2018 ರಿಂದ 22ನೇ ಜೂನ್, 2018ರವರೆಗೆ (ಪ್ರತಿ ದಿನ 4 ಬಾರಿ) ಪ್ರಸಾರ ಮಾಡಲಾಗಿದೆ. ಪ್ರತಿದಿನ ಪ್ರಾದೇಶಿಕ ವಾರ್ತೆಗಳ ಮುಂಚಿತವಾಗಿ ಜಾಹಿರಾತನ್ನು 7 ಸೆಂಕೆಡುಗಳ ಕಾಲ ಪ್ರದರ್ಶಿಸಲಾಗಿದೆ. ಈ ಜಾಹಿರಾತಿನ ಮುಖಾಂತರ ಪ್ರತಿಯೊಬ್ಬರು ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಅದರ ಸುಸ್ಥಿರ ಬಳಕೆ, ಲಾಭ ಹಂಚಿಕೆಯ ಕುರಿತು ಹಾಗೂ ಸ್ಥಳೀಯ ಸಮುದಾಯಗಳಿಗೆ, ವಾಣಿಜ್ಯ ಉದ್ದೇಶಗಳಿಗೆ ಬಳಕೆ, ಅವರ ಪಾತ್ರಗಳು ಮತ್ತು ಜವಾಬ್ದಾರಿಗಳು ಈ 3 ಉದ್ದೇಶಗಳ ಬಗ್ಗೆ ಅರಿವು ಮೂಡಿಸುವುಕ್ಕಾಗಿ ಪ್ರಸಾರಮಾಡಲಾಯಿತು.

3. **"ಅಂಟು ಚೀಟಿಯ ಮರಬೆಳೆಯುವ ಸ್ಥಳ" ಕಥೆ ಪುಸ್ತಕದ ಅನುವಾದ** :

ಅಂಟು ಚೀಟಿಯ ಮರಬೆಳೆಯುವ ಸ್ಥಳ" ಕಥೆ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಸ್ಟಿಕರ್ ಟ್ರೀ ಬೆಳೆಯುವ ಸ್ಥಳವು, ಜೀವವೈವಿಧ್ಯ ಹಾಗು ಅಧುನಿಕರಣದ ನಡುವಿನ ಸಂಘರ್ಷವನ್ನು ಗ್ರಹಿಸಲು, ನಗರ ಹಾಗೂ ಅರೆ-ನಗರದ ಪರಿಸರಗಳ ಕಡೆಗೆ ಒಂದು ಸರಳ ನೋಟವನ್ನು ಒದಗಿಸುತ್ತದೆ.

4. **ಕೈಪಿಡಿ:**

ಅಳಿವಿನಂಚಿನ ಪ್ರಭೇದಗಳ ವಿವರವನ್ನು ಜೀವವೈವಿಧ್ಯ ಕಾಯ್ದೆ, 2002ರ ಸೆಕ್ಷನ್ 38ರಲ್ಲಿ ಸಸ್ಯಗಳ ಮತ್ತು ಪ್ರಾಣಿಗಳ ಪ್ರಭೇಧಗಳ ಪಟ್ಟಿಗಳಲ್ಲಿ ವಿವರಿಸುತ್ತದೆ. ಈ ಪಟ್ಟಿಯಲ್ಲಿ ಅಳಿವಿನಂಚಿನಲ್ಲಿರುವ ಪ್ರಾಣಿ ಹಾಗೂ ಸಸ್ಯಗಳ ಸಂರಕ್ಷಣೆಯು ಅತ್ಯಂತ ಪ್ರಾಮುಖ್ಯವಾದುದು ಎಂಬುದರ ಕುರಿತು ತಿಳಿಸಲಾಗಿದೆ. ಇದು ಪ್ರತಿಯೊಂದು ಜಾತಿಗಳ ವ್ಯಂಗ್ಯಚಿತ್ರಗಳು ವಿವರಣಾತ್ಮಕವಾಗಿ ಓದುಗರ ಗಮನ ಸೆಳೆಯುವುದರೊಂದಿಗೆ ಪ್ರತಿಯೊಂದು ಜಾತಿಗಳ ಬಗ್ಗೆ ಸ್ವಲ್ಪ ಸಂಬಂಧಿತ ಮಾಹಿತಿ ನೀಡಿದೆ. ಪ್ರಕೃತಿಯ ಸಂರಕ್ಷಣೆಯ ಅಂತರಾಷ್ಟ್ರೀಯ ಅಳಿವಿನಂಚಿನಲ್ಲಿರುವ ಕೆಂಪು ಪಟ್ಟಿಯ ಜಾತಿಗಳ ಬಗ್ಗೆ ವಿವರಣೆ ನೀಡಲಾಗಿದೆ.

5. **2018ರ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ:**

ಯುಎನ್‌ಇಪಿ-ಜೆಫ್-ಎಂಒಇಎಫ್-ಎಬಿಎಸ್ ಯೋಜನೆಯ ಅಡಿಯಲ್ಲಿ, "ಜೈವಿಕ ಅಧಿನಿಯಮ, 2002 ಮತ್ತು ನಿಯಮಗಳ ಅಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭ ಹಂಚಿಕೆ ಸಂಬಂಧಿತ ನಿಬಂಧನೆಗಳ ಜಾರಿ ಮತ್ತು ಸಾಮರ್ಥ್ಯ ವರ್ಧನೆ" ಒಂದು ಭಾಗವಾಗಿ ರಾಷ್ಟ್ರೀಯ ಜೀವವೈವಿಧ್ಯದ ಪ್ರಾಧಿಕಾರವು ತಿಳಿಸಿದಂತೆ "ಜೀವವೈವಿಧ್ಯದ 25 ವರ್ಷಗಳ ಕ್ರಮಗಳ ಆಚರಣೆ" ಎಂಬ ಘೋಷಾವಾಕ್ಯದಡಿಯಲ್ಲಿ ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಸಿಬಿಡಿ ಉದ್ದೇಶಗಳ ಸಾಧನೆಯ ಮಹತ್ವ ಕುರಿತು ಕರ್ನಾಟಕ ಜೀವವೈವಿಧ್ಯ ಮಂಡಳಿಯು 22ನೇ ಮೇ 2018ರಂದು ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆಯನ್ನು ಬೆಂಗಳೂರಿನ ಅರಣ್ಯಭವನದಲ್ಲಿ ಆಚರಿಸಿತು.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**38/14 - UNEP-GEF-MoEF-ABS Project on "Strengthening the implementation of the Biological Diversity Act and Rules with focus on its ABS Provisions"**

1. **Awareness workshop for the media:**

   An awareness workshop on Biological Diversity Act, 2002 and its ABS provisions was conducted on 24th March, 2018 for the media in Aranya Bhavan, 8th Floor, Malleshwaram 18th cross, Bengaluru. The workshop was hosted to create awareness among the media and to seek their support ensuring a healthy dialogue in bringing forth the objectives of the Act, so that an impact is created on the society at large. The workshop was attended by representatives from Media/Press among others with a total of 42 participants.

2. **Mute captions telecasted on DD Chandana:**

   UNEP-GEF-MoEF-ABS Project, KBB telecasted time checks (Four time checks per day) on DD Chandana for a period of one month from 23rd May, 2018 to 22nd June, 2018. The time checks were displayed for 7 seconds before regional news every day. It telecasted information like; how each and every one of us should shoulder the responsibility of conservation and sustainable utilization of biological resources, about sharing benefits to the local communities by the users for commercial purposes to establish a link for realizing the objectives of conservation, the roles and responsibilities of the BMCs and effort to be taken by each and every one of us to realize the three objectives of the Convention etc.

3. **Translation of Story Book "The land where the sticker tree grows":**

   "The land where the sticker tree grows" was translated into Kannada language. The book offers a simple glance at urban and peri-urban environments to capture the conflict between biodiversity and modernization.

4. **Brochure:**

   The brochure "Threatened Species of Karnataka" details on the BD Act, 2002, Section 38 plant and animal species list. It is a step forward in raising awareness on the importance of conservation and preservation of the listed species of plants and animals from extinction. It talks about each species with

illustrations in a caricature style to grab attention of the readers with little but relevant information about each species, mostly adapted from the IUCN (International Union for Conservation of Nature) red list of threatened species mostly.

5. **International Day for Biological Diversity (IDB) 2018:**

   The 2018 International Day for Biological Diversity (IDB) marked the 25th anniversary of the entry into force of the Convention on Biological Diversity (CBD) and emphasized on the progress made in the achievements of its objectives at the national and global levels. Karnataka Biodiversity Board, Bengaluru celebrated the event in Aranya Bhavan, Bengaluru under the aegis of National Biodiversity Authority (NBA), Chennai as part of the UNEP-GEF-MoEF-ABS Program on "Strengthening the implementation of the Biological Diversity Act with focus on its Access Benefit Sharing Provisions.

   The same is submitted for the information of the Board.

**38/15– ಅಧ್ಯಕ್ಷರ ಅನುಮೋದನೆ ಮೇರೆಗೆ ಇತರೆ ಯಾವುದಾದರೂ ವಿಷಯಗಳು.**

**38/15 - Any other subject with the permission of the Chair.**

| | |
|---|---|
| ಸಹಿ/– | ಸಹಿ/– |
| **ಅಧ್ಯಕ್ಷರು** | **ಸದಸ್ಯ ಕಾರ್ಯದರ್ಶಿ** |
| **ಕರ್ನಾಟಕ ಜೀವವೈವಿಧ್ಯ ಮಂಡಳಿ** | **ಕರ್ನಾಟಕ ಜೀವವೈವಿಧ್ಯ ಮಂಡಳಿ** |

**Additional Agenda No: 38/15**

**Sub: Organize National Conference in association with Karnataka Biodiversity Board**

**-------**

Dr. Vijaya Kumara, Co-ordinator and Assistant Prof. Dept. of Wildlife and Management, Bio Science Complex, Jnana Sahyadri, Shakraghatta-577451 has planned to organize a two day National Conference on the topic entitled "Biodiversity Conservation – Recent trends and future Strategies" on $6^{th}$ to $7^{th}$ October, 2018 in Kuvempu University in association with Karnataka Biodiversity Board, Bangalore. Requested Chairman, Karnataka Biodiversity Board for financial assistance of Rs. 4.00 lakhs (Four lakhs) to organize the Conference. **(Annexure-IX).**

The proposal is placed for consideration of the Board.

| | |
|---|---|
| **Chairman**<br>**Karnataka Biodiversity Board** | **Member Secretary**<br>**Karnataka Biodiversity Board** |